**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ**
**ನೃಪತುಂಗ ರಸ್ತೆ, ಬೆಂಗಳೂರು 560 001.**

ಸಂ: ಆರ್.ಎಂ.ಎಸ್.ಎ/ವಿ.ಮಾ.ವ.ವಿ.ದಿನ/2012-13 ದಿನಾಂಕ: 06.06.2012

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
_________________ ಜಿಲ್ಲೆ.

_________________

ಮಾನ್ಯರೆ,

ವಿಷಯ:- ದಿನಾಂಕ: 26.06.2012 ರಂದು **"ವಿಶ್ವ ಮಾದಕ ವಸ್ತುವಿರೋಧಿ ದಿನ"** ಆಚರಿಸುವ ಬಗ್ಗೆ.

ಉಲ್ಲೇಖ:-1. ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯವರು ಮಾನ್ಯ ಶಿಕ್ಷಣ ಸಚಿವರಿಗೆ ಬರೆದಿರುವ ಪತ್ರ.

2. ಮಾನ್ಯ ಶಿಕ್ಷಣ ಸಚಿವರ ಕಾರ್ಯಾಲಯದ ಟಿಪ್ಪಣಿ.

********

ಉಲ್ಲೇಖ-1 ರಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯು ದಿನಾಂಕ: 26.06.2012. ರಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜನಜಾಗೃತಿ ಮೆರವಣಿಗೆ, ವಿಚಾರ ಸಂಕಿರಣಗಳನ್ನು ಏರ್ಪಡಿಸಿರುತ್ತದೆ. ಇದರಲ್ಲಿ ತಜ್ಞ ವೈದ್ಯರು, ಸಮಾಜ ಸೇವಕರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ತೊಡಗಿಸಿಕೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ಹಾಗೂ ದಿನಾಂಕ: 26.06.2012 ರಂದು ಮಾದಕ ವಸ್ತುವಿರೋಧಿ ದಿನವನ್ನು ಶಿಕ್ಷಣ ಸಂಸ್ಥೆಗಳಲ್ಲಿ ಆಚರಿಸುವಂತೆ ಸೂಚಿಸಿ ಸೂಕ್ತ ಆದೇಶ ನೀಡಲು ಮಾನ್ಯ ಶಿಕ್ಷಣ ಸಚಿವರನ್ನು ಕೋರಿರುತ್ತಾರೆ. ಪತ್ರವನ್ನು ಅಡಕಗೊಳಿಸಿದೆ.

ಉಲ್ಲೇಖ-2 ರ ಟಿಪ್ಪಣಿಯಲ್ಲಿ ಈ ಕಾರ್ಯಕ್ರಮವನ್ನು ಎಲ್ಲಾ ಪ್ರೌಢಶಾಲೆಗಳಲ್ಲಿ ಆಚರಿಸಲು ಅಗತ್ಯ ಕ್ರಮಕೈಗೊಳ್ಳಲು ಸೂಚನೆ ನೀಡಿದ್ದು ಅದರಂತೆ ದಿನಾಂಕ: 26.06.2012 ರಂದು ರಾಜ್ಯದ ಎಲ್ಲಾ ಪ್ರೌಢಶಾಲೆಗಳಲ್ಲಿ **"ವಿಶ್ವ ಮಾದಕ ವಸ್ತುವಿರೋಧಿ ದಿನ"** ವನ್ನು ಆಚರಿಸುವಂತೆ ಎಲ್ಲಾ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ತಿಳಿಸಲು ಸೂಚಿಸಿದೆ.

ತಮ್ಮ ನಂಬುಗೆಯ

ರಾಜ್ಯ ಯೋಜನಾ ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

E:\24.05.11\Office correspandence\office1.doc